

ಸಿಂಡಿಕೇಟ್ ಬ್ಯಾಂಕಿನ ದಾಜಿಬಾನಪೇಟೆ ಬ್ರ್ಯಾಂಚಿನಲ್ಲಿ ಉದ್ಯೋಗಿಯಾದ ತನ್ನ ಗಂಡ ಶಂಕರನಿಂದ 'ಫೇಸ್‌ಬುಕ್ ಕ್ವೀನ್' ಎಂದು ಮುದ್ದಿನಿಂದ ಕರೆಸಿಕೊಳ್ಳುವ ಸುಮಾರು ನಲವತ್ತರ ಆಸುಪಾಸಿನ ನಮ್ಮ ಸರಸ್ವತಿಗೆ, ಹೊರಕೋಣೆಯ ಗೋಡೆ ಗಡಿಯಾರದ ಮುಳ್ಳು ಅಂದು ಸಂಜೆ ಐದು ಗಂಟೆ ತೋರಿಸುತ್ತಿದ್ದಂತೆಯೇ ಒಂದು ರೀತಿಯ ಭಯಮಿಶ್ರಿತ ದಿಗಿಲು ಮುತ್ತಿಕೊಳ್ಳತೊಡಗಿತ್ತು. ಅವಳ ಈ ವಿಚಿತ್ರ ಮನಸ್ಥಿತಿಗೆ ಕಾರಣವೆಂದರೆ, ಅಂದು ಮುಂಜಾನೆ ಒಂಬತ್ತಕ್ಕೆ ಶಂಕರ ರೆಡಿಯಾಗಿ ಅತ್ತ ಬ್ಯಾಂಕಿಗೆ ತೆರಳುತ್ತಿದ್ದಂತೆಯೇ, ಇತ್ತ ಸರಸ್ವತಿ ತನ್ನ ಅನುದಿನದ ರೂಢಿಯಂತೆ ಕಂಪ್ಯೂಟರಿನ ಎದಿರು ಫೇಸ್‌ಬುಕ್ ತೆರೆದು ಕೂತಿದ್ದಳು. ಎಂದೂ ಇಲ್ಲದ್ದು ಈ ದಿನವೇ, ಸತ್ಯ ಹರಿಶ್ಚಂದ್ರ ಎಂಬ ಅವಳ ಅನಾಮಿಕ ಸ್ನೇಹಿತನೊಬ್ಬನ 'ನಿಮ್ಮ ದೊಡ್ಡ ಅಭಿಮಾನಿ ನಾನು, ದಯವಿಟ್ಟು ನಿಮ್ಮ ಮನೆ ವಿಳಾಸ ಕೊಡಿ, ಇಂದು ಸಂಜೆ ನಿಮ್ಮನ್ನು ಮುಖತಃ ಭೇಟಿಯಾಗುವ ಇಚ್ಛೆ ಇದೆ' ಎಂಬ ಒಂದು ಸಂದೇಶ ಅವಳ ಇನ್ ಬಾಕ್ಸಿಗೆ ಬಂದು ಬಿದ್ದಿತ್ತು. ಅದನ್ನು ಕಂಡೇ ಅವಳು ತೀವ್ರ ಗಲಿಬಿಲಿಗೆ ಒಳಗಾಗಿದ್ದಳು. ಕನಸೋ ಭ್ರಮೆಯೋ ಎಂಬಂತೆ ಮತ್ತೆ ಮತ್ತೆ ಅದನ್ನು ಓದಿಕೊಂಡಿದ್ದಳು.

ಹಾಗೆಯೇ ತುಸು ಹೊತ್ತು ಏನು ಮಾಡಬೇಕೆಂದೇ ತೋಚದ ಸರಸ್ವತಿ, 'ಖುಷಿಯಾಯ್ತು ಬನ್ನಿ, ಸಂಜೆ ನನ್ನ ಗಂಡ ಬ್ಯಾಂಕಿನಿಂದ ಆರೂವರೆಗೆಲ್ಲ ಮನೆಗೆ ಬರುತ್ತಾರೆ. ನೀವೂ ಆಗಲೇ ಬಂದರೆ ಅವರ ಪರಿಚಯವೂ ಆದಂತಾಗುತ್ತದೆ' ಎಂದು ಸಂದೇಶ ನೀಡಿ, ಅದರೊಂದಿಗೆ, ಮನೆ ನಂ. 304, ಮೂರನೇ ಮಹಡಿ, ಓಂ ಅಪಾರ್ಟಮೆಂಟ್, ಕುಸುಗಲ್ ರಸ್ತೆ, ಕೇಶ್ವಾಪುರ ಅನ್ನುವ ತನ್ನ ವಿಳಾಸವನ್ನೂ ಟೈಪ್ ಮಾಡಿದ್ದಳು. 'ಓಕೆ ಮ್ಯಾಡಂ, ಖಂಡಿತಾ, ನಿಮ್ಮ ಮನೆಯವರ ಬಳಿಯೂ ಮಾತಾಡಿದ ಹಾಗಾಗುತ್ತದೆ' ಅಂತ ಅತ್ತ ಕಡೆಯಿಂದಲೂ ಸಂದೇಶ ಬಂತು. ಸರಸ್ವತಿಗೂ ತುಸು ನಿರಾಳವಾಯ್ತು. ಮುಂದಿನ ಕ್ಷಣದಲ್ಲೇ 'ನಿಮ್ಮ ಸೆಲ್ ನಂ. ಪ್ಲೀಸ್ ಮ್ಯಾಡಂ, ಯಾಕೆಂದರೆ ನಾನು ವಿಶ್ವ ಸಂಚಾರಿ, ನಿಮ್ಮ ಅಪಾರ್ಟ್‌ಮೆಂಟ್ ಸಿಗದಿದ್ದರೆ, ಅಗತ್ಯಕ್ಕೆ ಇರಲಿ ಅಂತ' ಎಂಬ ಇನ್ನೊಂದು ಚುಟುಕು ಸಂದೇಶ ಅಲ್ಲಿತ್ತು. ಇವಳೂ ಕೊಂಚ ಯೋಚಿಸಿ 'ಸೆಲ್ ನಂ. 9483971026' ಅಂತ ಶಂಕರ್‌ನ ಫೋನ್ ನಂಬರ್ ಟೈಪಿಸಿ ಕಳಿಸಿದ್ದಳು. ತಕ್ಷಣವೇ 'ನೀವು ತುಂಬಾ ಕ್ಯೂಟ್ ಮತ್ತು ಸ್ಮಾರ್ಟ!' ಅಂತ ಅತ್ತ ಕಡೆಯಿಂದ ಇನ್ನೊಂದು ಪುಟ್ಟ ಸಂದೇಶ ರವಾನೆಯಾಗಿತ್ತು. ಸರಸ್ವತಿ ಒಮ್ಮೆಲೇ ಹೌಹಾರಿದಳು. ಕ್ಷಣ ಮನಸ್ಸು ನಡುಗಿದಂತಾಗಿ ಮೈಯೆಲ್ಲ ಬೆವೆತು ಹೋಯಿತು. ಮತ್ತೆ ಅವಳು ಉತ್ತರಿಸುವ ಗೊಡವೆಗೆ ಹೋಗಲಿಲ್ಲ. ಇದನ್ನೇ ಮುಂದುವರೆಸಿದರೆ, ಎದುರಲ್ಲೇನೋ ಗಂಡಾಂತರ ಕಾದಿರುವುದು ಅವಳ ಅಂತರಂಗದ ಅರಿವಿಗೆ ಸೂಕ್ಷ್ಮ ನಿಲುಕಿತು. ಇಂಥದೊಂದು ಸಂದಿಗ್ಧತೆಯಲ್ಲಿ ತೇಲುವಂತೆ ಮಾಡಿದ ಈ ಫೇಸ್‌ಬುಕ್ ಸಹವಾಸ ಸರಸ್ವತಿಯೊಂದಿಗೆ ಶುರುವಾಗಿದ್ದು, ಇತ್ತೀಚಿನ ಎರಡು ಮೂರು ವರ್ಷಗಳ ಅವಧಿಯಲ್ಲಿ. ಈ ಸತ್ಯ ಹರಿಶ್ಚಂದ್ರ ಎಂಬ ಅನಾಮಿಕ ಖಾತೆಯವ ಪರಿಚಿತನಾಗಿದ್ದು ಅವಳು 'ಹುಬ್ಬಳ್ಳಿ ಮಂದಿ' ಎಂಬ ಗ್ರೂಪ್ಪಿಗೆ ಸೇರಿಕೊಂಡ ನಂತರದಲ್ಲಿ.

ಮಧ್ಯಾಹ್ನದ ಊಟದ ವೇಳೆಯಲ್ಲಿ ರೂಢಿಯಂತೆ ಸುಮ್ಮನೇ ಫೋನ್ ಮಾಡಿದ ಶಂಕರನ ಬಳಿಯೂ ಈ ವಿಷಯ ಹೇಳಲು ಸರಸ್ವತಿ ತುಸು ಹೆದರಿಕೊಂಡಳು. 'ಹಿಂದೆ ಮುಂದೆ ಗೊತ್ತಿಲ್ಲದ ಯಾರು ಯಾರೋ ಅಪರಿಚಿತರಿಗೆಲ್ಲ ನಮ್ಮ ವಿಳಾಸ ಕೊಡಲು ಹೋಗಬೇಡ, ಇದು ಪಟ್ಟಣ, ನಿಮ್ಮ ಅಂಬೆಹಳ್ಳಿಯಂಥಲ್ಲ ಇದು' ಅಂತ ಆತ ಅಲ್ಲಿಂದ ಫೋನ್‌ನಲ್ಲೇ ದಬಾಯಿಸಿದರೆ ಎಂಬ ಸಣ್ಣ ಭಯ ಅವಳಿಗೆ. ಆದರೂ ಅವಳ ಸ್ಪಂದನೆಗೂ ಮೀರಿ ಅವಳ ಕೈಗಳು ಮನೆಯನ್ನು